ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ನ್ಯಾಯಾಲಯ ,
ಚಿಕ್ಕಮಗಳೂರು.

ಸಿಸಿ ಸಂಖ್ಯೆಃ **1215/ 2023**

ದಿನಾಂಕಃ **10.03.2025**

ಪಿರ್ಯಾದುದಾರರುಃ ರಾಜ್ಯದ ಪರವಾಗಿ ನಗರ ಠಾಣಾ ಪೋಲಿಸರು

ವಿರುದ್ಧ

ಆರೋಪಿತರುಃ **1.** ಅಹಮದ್ ಕಬೀರ್
**2.** ಕಿಶೋರ್ ಯು

ದೋಷಾರೋಪಣೆ

ಚಿಕ್ಕಮಗಳೂರಿನ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯಾದ ಶ್ರೀ ಸಿ.ವೀರಭದ್ರಯ್ಯ ಎಂ.ಎ., ಎಲ್ಎಲ್.ಬಿ, ಆದ ನಾನು ಮೇಲೆ ನಮೂದು ಮಾಡಿರುವ ಆರೋಪಿತರಾದ ನಿಮ್ಮ ವಿರುದ್ಧ ಹೊರಿಸುವ ಆರೋಪಣೆ ಏನೆಂದರೆಃ

ದಿನಾಂಕಃ**02-10-2021** ರಿಂದ **04-10-2021** ರ ಮಧ್ಯದ ಒಂದು ದಿನ ರಾತ್ರಿ ವೇಳೆಯಲ್ಲಿ ಆರೋಪಿತರಾದ ನೀವು ಚಿಕ್ಕಮಗಳೂರು ನಗರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಚಿಕ್ಕಮಗಳೂರು ನಗರದ ದಂಟರಮಕ್ಕಿ ಎಸ್**.**ಸಿ**.** ಕಾಲೋನಿಯಲ್ಲಿರುವ ಚಾಸಾ**-1** ರವರ ಮನೆಯ ಮೇಲ್ಭಾಗದ ಶೀಟ್ ನ್ನು ಕಬ್ಬಿಣದ ರಾಡ್ ನಿಂದ ಒಡೆದು ಕೆಳಗೆ ಇಳಿದು ರೂಂ ನಲ್ಲಿದ್ದ ಗಾಡ್ರೇಜ್ ಬೀರುವಿನ ಬೀಗವನ್ನು ಕಬ್ಬಿಣದ ರಾಡ್ ನಿಂದ ಮೀಟಿ ಬೀರುವಿನ ಡೋರ್ ಲಾಕ್ ಓಪನ್ ಮಾಡಿ ಮನೆಯ ಒಳಗಡೆ ನುಗ್ಗಿ ಕಳ್ಳತನ ಮಾಡುವ ಉದ್ದೇಶದಿಂದ ಒಳಗೆ ಅತಿಕ್ರಮ ಪ್ರವೇಶ ಮಾಡಿರುತ್ತೀರಿ**.** ಆ ಕಾರಣ ಆರೋಪಿತರಾದ ನೀವು ಭಾ**.**ದ**.**ಸಂ**.** ಕಲಂ **457** ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ ಎಂದೂಃ

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ:1 ರವರ ಮನೆಯಒಳಗೆ ಅತಿಕ್ರಮ ಪ್ರವೇಶ ಮಾಡಿ ಸದರಿ ಮನೆಯ ಗಾಡ್ರೇಜ್ ಬೀರುವಿನ ಡೋರ್ಲಾಕ್ ಓಪನ್ ಮಾಡಿ ಅದರಲ್ಲಿದ್ದ ಸುಮಾರು ಸುಮಾರು **8** ಗ್ರಾಂ ಚಿನ್ನದ ಒಡವೆ ಮತ್ತು ರೂ.**25,000-00** ಹಣವನ್ನು ಕಳ್ಳತನ ಮಾಡಿರುತ್ತೀರಿ. ಆ ಕಾರಣ ಆರೋಪಿತರಾದ ನೀವು ಭಾ.ದ.ಸಂ. ಕಲಂ **380** ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ವಿರುದ್ಧ ಈ ದೋಷಾರೋಪಣೆ ಹೊರಿಸಲಾಗಿದೆ.

ಮೇಲಿನ ದೋಷಾರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಟ್ಟಿರುತ್ತದೆ ಎಂದು ಈ ಮೂಲಕ ನಿರ್ದೇಶಿಸಲಾಗಿದೆ.

ಸಹಿ/-
(ಸಿ. ವೀರಭದ್ರಯ್ಯ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ., ಚಿಕ್ಕಮಗಳೂರು.

ವೈ.ಮ.